# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ. ಹರೀಶ್ ಕುಮಾರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 990

ಉತ್ತರಿಸಬೇಕಾದ ದಿನಾಂಕ : 21.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಣ್ಣ ಹಿಡುವಳಿಯ ಕೃಷಿಕನು ಬೇರೆ ಬೇರೆ ಗ್ರಾಮ ವ್ಯಾಪ್ತಿಯಲ್ಲಿ ಒಂದೇ ವ್ಯಕ್ತಿ ಹೆಸರಿನಲ್ಲಿ ಭೂಮಿ ಹೊಂದಿದ್ದು, ಕೃಷಿ ಸಾಲ ಪಡೆಯುವ ಸಂದರ್ಭದಲ್ಲಿ ಕೇವಲ ಒಂದು ಕಡೆ ಅಂದರೆ ಒಂದು ಗ್ರಾಮದ ವ್ಯಾಪ್ತಿಯಲ್ಲಿ ಕೃಷಿ ಸಹಕಾರ ಸಂಘದಲ್ಲಿ ಕೃಷಿ ಸಾಲ ಪಡೆಯಲು ಅರ್ಹನಾಗಿದ್ದು, ಇನ್ನೊಂದು ಗ್ರಾಮದಲ್ಲಿ ಹೊಂದಿರುವ ಭೂಮಿಯ ಮೇಲೆ ಯಾವುದೇ ಕೃಷಿ ಸಾಲ ಪಡೆದಿಲ್ಲವೆಂದು ಬೇಬಾಕಿ ಪತ್ರ ನೀಡುವುದು ಪ್ರಸ್ತುತ ಚಾಲ್ತಿಯಲ್ಲಿರುವ ಕೃಷಿ ಸಹಕಾರ ಸಂಘದ ನಿಯಮವಲ್ಲವೇ; | ಎರಡು ಸಹಕಾರ ಸಂಘದ ವ್ಯಾಪ್ತಿಯಲ್ಲಿ ರೈತನು ಭೂಮಿ ಹೊಂದಿದ್ದರೆ ರೈತನು ಅರ್ಜಿ ಸಲ್ಲಿಸಿದ ಸಹಕಾರ ಸಂಘವು ಇನ್ನೊಂದು ಸಂಘದಿಂದ ಬೇಬಾಕಿ ಪಡೆದು ಅದೇ ಸಂಘದಲ್ಲಿ ಎರಡೂ ಸಂಘದ ವ್ಯಾಪ್ತಿಯಲ್ಲಿ ಇರುವ ಭೂಮಿಯ ಮೇಲೆಯೂ ಬೆಳೆ ಸಾಲ ಪಡೆಯಬಹುದಾಗಿದೆ.<br><br>ಸಹಕಾರ ಸಂಘಗಳು ರೈತರಿಗೆ ರೂ.3.00 ಲಕ್ಷಗಳವರೆಗಿನ ಬೆಳೆ ಸಾಲವನ್ನು ನಿವ್ವಳ ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಸಾಲ ವಿತರಿಸುವ ಯೋಜನೆಗೆ ಸಂಬಂಧಿಸಿದ ಸರ್ಕಾರದ ಆದೇಶ ಸಂಖ್ಯೆ ಸಿಒ 166 ಸಿಎಲ್‌ಎಸ್ 2021, ದಿ:27-9-2021 ರ ಷರತ್ತು ಸಂಖ್ಯೆ 05 ಈ ಕೆಳಗಿನಂತಿರುತ್ತದೆ.<br><br>"ಬಡ್ಡಿ ಸಹಾಯಧನವು ಒಂದು ಸಹಕಾರ ಸಂಘದಲ್ಲಿ ಪಡೆದ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ರೈತನ ವಾಸ ಸ್ಥಳ ಮತ್ತು ಭೂಮಿ ಒಂದೇ ಸಂಘದ ವ್ಯಾಪ್ತಿಯಲ್ಲಿದ್ದರೆ ಇತರೇ ಯಾವುದೇ ಸಂಘದ ಬೇಬಾಕಿ ಪತ್ರ ಪಡೆಯಬೇಕಿಲ್ಲ.<br><br>ರೈತನ ಭೂಮಿ ಮತ್ತು ವಾಸ ಸ್ಥಳ ಬೇರೆ ಬೇರೆ ಸಂಘದ ವ್ಯಾಪ್ತಿಯಲ್ಲಿದ್ದರೆ ಅಥವಾ ಎರಡು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬೇರೆ ಬೇರೆ ಭೂಮಿ ಹೊಂದಿದ್ದರೆ, ರೈತನು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ಸಂಘವು ರೈತನು ಹೊಂದಿರುವ ಒಟ್ಟಾರೆ ಭೂಮಿಯ ವಿವರವನ್ನು ಪಡೆದು, ವಾಸ ಸ್ಥಳದ ಸಂಘ ಮತ್ತು ರೈತನ ಇತರೆ ಭೂಮಿಯ ಸಂಘದಿಂದ ಬೇಬಾಕಿ ಪತ್ರ ಪಡೆದು ಅದೇ ಸಂಘದಲ್ಲಿ ಇತರೇ ಸಂಘದ ವ್ಯಾಪ್ತಿಯ ಭೂಮಿಗೂ ಸಹ ಸಾಲ ವಿತರಿಸಬಹುದಾಗಿದೆ ಮತ್ತು ಬೇಬಾಕಿ ಪತ್ರ ಪಡೆಯುವುದು ಸಂಘದ ಜವಾಬ್ದಾರಿಯಾಗಿರುತ್ತದೆ" ಎಂದು ತಿಳಿಸಿರುತ್ತದೆ. |

| | | |
|---|---|---|
| ಆ | ಕನಿಷ್ಟ ಭೂಮಿ ಹೊಂದಿರುವ ಹಿಡುವಳಿದಾರರಿಗೆ ಇದರಿಂದ ತೊಂದರೆಯಾಗಿದ್ದು, ಸದರಿ ನಿಯಮವನ್ನು ಮಾರ್ಪಾಡಿಸಿ ಎರಡು ಕಡೆ ಗ್ರಾಮದ ವ್ಯಾಪ್ತಿಯಲ್ಲಿ ಸಾಲ ಸಿಗುವ ನಿಟ್ಟಿನಲ್ಲಿ ಸರ್ಕಾರ ಅವಕಾಶ ಮಾಡಿಕೊಡುವುದೇ?<br>(ಮಾಹಿತಿ ಒದಗಿಸುವುದು) | ಭೂ ಹಿಡುವಳಿದಾರನು ಎರಡು ಸಹಕಾರ ಸಂಘದ ವ್ಯಾಪ್ತಿಯಲ್ಲಿ ಭೂಮಿ ಹೊಂದಿದ್ದರೆ, ಎರಡು ಕಡೆ ಇರುವ ಭೂಮಿ ಮೇಲೆ ಒಂದೇ ಸಹಕಾರ ಸಂಘದಲ್ಲಿ ಕೃಷಿ ಸಾಲ ಪಡೆಯಲು ಅವಕಾಶ ಇರುವುದರಿಂದ ರೈತರಿಗೆ ಯಾವುದೇ ತೊಂದರೆ ಇರುವುದಿಲ್ಲ. |

**ಸಂಖ್ಯೆ: ಸಿಒ 377 ಸಿಎಲ್ಎಸ್ 2021**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**